ಶ್ರೀ ಜಗದೀಶ್ ಶೆಟ್ಟರ್ : ಅದ್ಯಾವುದೂ ಸಮಸ್ಯೆಯಾಗದಂತೆ ಇದನ್ನು ಮುಗಿಸುತ್ತೇವೆ.

ಶ್ರೀ ಜಿ. ಎಸ್ ಗಡ್ಡದೇವರಮಠ : ಆದಷ್ಟು ಬೇಗ ಇವತ್ತೇ ಮಾಡುತ್ತೇವೆಂದು ಹೇಳಿ: ವರ್ಕ್ ಆರ್ಡರ್ ಇವತ್ತೇ ಇಷ್ಯೂ ಮಾಡುತ್ತೇವೆಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನಾವು ಮೂರು ತಿಂಗಳ ಗಡುವನ್ನು ನಿಗಧಿ ಮಾಡಿಕೊಂಡಿದ್ದೇವೆ, ಆದಷ್ಟು ಬೇಗನೆ ಮುಗಿಸುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಇದರ ಮೇಲೊಂದು ಕೇಳಿದ್ದೇನೆ, ಅದು ನಾಳೆ ಬರಬಹುದು, ಅದು ಮುಗಿದು ಹೋಗಿಬಿಡುತ್ತದೆ, ಅದೇ ಪ್ರಶ್ನೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಬಂದಾಗ ಕೇಳಿ.

ಇ, ವಿಷಯ ಪಾವಗಡ ತಾಲ್ಲೂಕಿನಲ್ಲಿ ಇಲ್ಲಿ ಡೆಂಗ್ಯೂ ಇತ್ಯಾದಿ ಜ್ವರಗಳಿಗೆ ವಿಶೇಷ ವೈದ್ಯಕೀಯ ಸೇವೆ ನೀಡುವುದರ ಬಗ್ಗೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನಲ್ಲಿ ಇಲಿ ಹಾಗೂ ಡೆಂಗ್ಯೂ ಜ್ವರ ಅಲ್ಲಿ ಕಾಣಿಸಿಕೊಂಡಿದೆ, ಈ ಸಂಬಂಧವಾಗಿ ಇಲಾಖೆಯು ಅನೇಕ ರೀತಿಯ ಔಷಧಗಳನ್ನು ಸರಬರಾಜು ಮಾಡಿದ್ದರೂ ಸಹ ಆ ಭಾಗದಲ್ಲಿ ನಮ್ಮ ಸಚಿವರು ಬಂದಾಗ 39 ಹಳ್ಳಿಗಳಲ್ಲಿ ಈ ಜ್ವರ ಹರಡಿತ್ತು. ಈಗ ಯಥೇಚ್ಚವಾಗಿ ಸುಮಾರು ತಾಲ್ಲೂಕಿನಲ್ಲಿ 68 ಹಳ್ಳಿಗಳಲ್ಲಿ ಈ ಕಾಯಿಲೆ ಹರಡಿದ್ದು ಪ್ರತಿಯೊಂದು ಆರೋಗ್ಯ ಕೇಂದ್ರಗಳಲ್ಲಿ ಕೂಡ ಪ್ರತಿದಿನ ನೂರಾರು ರೋಗ ಪೀಡಿತರು ಹೋಗಿ ಅಲ್ಲಿ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅಲ್ಲಿ ಸಿಬ್ಬಂದಿಯ ಕೊರತೆ ಇದೆ, ನಮ್ಮ ಸಚಿವರು ಬಂದು ಅಲ್ಲಿ ಖಾಲಿ ಇರುವ ಜಾಗಗಳನ್ನು ತುಂಬಿದರೂ ಸಹ ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆ ಇದೆ. ಇಡೀ ತಾಲ್ಲೂಕನ್ನು ಆ ಜ್ವರ ಹರಡುವ ಮುನ್ಸೂಚನೆ ಇರುವುದರಿಂದ, ಇದುವರೆವಿಗೆ ಯಾವುದೇ ಕಾರಣಕ್ಕೂ ಇಷ್ಟೆಲ್ಲಾ ಕ್ರಮಗಳನ್ನು ಕೈಗೊಂಡರೂ ಕೂಡ ಆ ಜ್ವರ ನಿಯಂತ್ರಣಕ್ಕೆ ಬಂದಿಲ್ಲ. ಎಲ್ಲಾ ಹಳ್ಳಿಗಳು ಕವರ್ ಆಗುವ ಸಂಧರ್ಬದಲ್ಲಿ ಇಲಾಖೆಯವರಿಂದ ಹೆಚ್ಚುವರಿ ಸಿಬ್ಬಂದಿಯನ್ನು ನೇಮಿಸಿ ಏನು ಕಿರಿಯ ಮಹಿಳಾ ಉಪಕೇಂದ್ರಗಳಿವೆ, ಅಲ್ಲಿ ಚಿಕಿತ್ಸೆ ಕೊಡಿಸುವಂತಹ ವ್ಯವಸ್ಥೆಯನ್ನೂ ಸಹ ಮಾಡಿಸಬೇಕು. ಮಾನ್ಯ ಸಚಿವರು ಆ ಭಾಗಕ್ಕೆ ಈ ಜ್ವರ ಬರಲಿಕ್ಕೆ ಹಂದಿ ಮತ್ತು ಸೊಳ್ಳೆಗಳು ಕಾರಣವೆಂದು ಹೇಳಿ, ಹಂದಿಗಳನ್ನು ಕೊಲ್ಲಲಿಕ್ಕೆ ಆದೇಶ ಕೊಟ್ಟುಬಂದರು. ಈಗ ಆ ಭಾಗದಲ್ಲಿ ಹಂದಿ ಸಾಕಾಣಿಕೆಯ ಉಪ ಕಸುಬು ಮಾಡತಕ್ಕಂತಹ ಜನ ಇವತ್ತು ಅಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಅವರ ಜೀವನೋಪಾಯಕ್ಕೆ ಹಂದಿ ಸಾಕಾಣಿಕೆ ಕಸುಬನ್ನು ಅವಲಂಬಿಸಿರುವುದರಿಂದ ಹಂದಿ ಸಾಕಾಣಿಕೆ ಮಾಡಲಿಕ್ಕೆ ಪ್ರತ್ಯೇಕ ಜಾಗವನ್ನೂ ಸರ್ಕಾರ ಗುರುತಿಸಿ ಅವರ ಜೀವನೋಪಾಯಕ್ಕೆ ಹಂದಿಗಳ ಸಂರಕ್ಷಣೆ ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅದೂ ಅಲ್ಲದೆ ಆರೋಗ್ಯ ಇಲಾಖೆ ಕ್ರಿಮಿನಾಶಕ ಔಷಧಿಗಳನ್ನು ಸಿಂಪಡಿಸಲು ಕ್ರಮ ಕೈಗೊಂಡಿದೆ. ಎಲ್ಲಾ ಹಳ್ಳಿಗಳಲ್ಲೂ ಈವೊಂದು ಕಾಯಿಲೆ ಹರಡುತ್ತಿರುವುದರಿಂದ ಕೇವಲ ನಾಲ್ಕು ಧೂಮೀಕರಣಗಳು ಕೆಲಸ ಮಾಡುತ್ತಿರುವುದರಿಂದ ಏನೂ ಕೆಲಸವಾಗುತ್ತಿಲ್ಲ.

ಪ್ರತಿಯೊಂದು ಗ್ರಾಮಗಳಿಗೂ ಕೀಟನಾಶಕ ಧೂಮೀಕರಣ ಯಂತ್ರಗಳನ್ನು ಸರ್ಕಾರದಿಂದ ಸರಬರಾಜು ಮಾಡಿ, ಆವೊಂದು ಭಾಗದಲ್ಲಿ ನಿಯಂತ್ರಣಕ್ಕೆ ಬಾರದಿರುವ ಈ ಜ್ವರವನ್ನು ತಡೆಗಟ್ಟಲು ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಆರ್ ಅಶೋಕ್ : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಮಾನ್ಯ ಅಧ್ಯಕ್ಷರೆ, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜ್ವರ ಪ್ರಕರಣಗಳು ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇವುಗಳಲ್ಲಿ ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆಯು ಸಹ ಸೇರಿರುತ್ತದೆ.

ಇಲಿಜ್ವರ ರೋಗವು , ಇಲಿಗಳ ಮೂತ್ರದಲ್ಲಿ ಹೊರಬಿದ್ದ 'ಸ್ಪೈರೋಕೀಟ್' ಗಳೆಂಬ ಪರಿಮಾಣು ಕ್ರಿಮಿಗಳು ಮನುಷ್ಯನ ದೇಹದ ಒಳಗೆ ಯಾವುದೇ ರೀತಿಯಲ್ಲಿ ಸೇರಿದಾಗ ಹರಡುವ ರೋಗವಾಗಿರುತ್ತದೆ. ಇಲಿಜ್ವರ ಪ್ರಕರಣಗಳು ಹರಡದಂತೆ ನಿಯಂತ್ರಿಸಲು – ಸೋಂಕು ತಗುಲಿದ ಇಲಿ, ಹೆಗ್ಗಣ ಹಾಗೂ ಇತರ ಸಾಕು ಪ್ರಾಣಿಗಳ ಮೂತ್ರವು ನೀರಿನಲ್ಲಿ ಬೆರೆತು ಕಲುಷಿತವಾಗದಂತೆ ಹಾಗೂ ಇಂತಹ ನೀರಿದ್ದಲ್ಲಿ, ಜನರಿಗೆ ಇದರ ಸಂಪರ್ಕವಾದಂತೆ ನೋಡಿಕೊಳ್ಳುವುದು, ಬರಿಗಾಲಿನಲ್ಲಿ ಓಡಾಡದೇ ಇರುವುದು ಹಾಗೂ ಇಲಿ ಮತ್ತು ಹೆಗ್ಗಣಗಳ ನಿಯಂತ್ರಣ ಮಾಡುವುದು ಅತಿ ಮುಖ್ಯವಾಗಿರುತ್ತದೆ.

ಈ ಬಗ್ಗೆ ಡಿಸೆಂಬರ್ 05 ಮತ್ತು ಜನವರಿ 06 ರಿಂದ ಪೂರ್ವಭಾವಿಯಾಗಿ ರೋಗಗಳ ಸಮೀಕ್ಷಾ ಕಾರ್ಯವನ್ನು ನಡೆಸಲಾಗುತ್ತಿದ್ದು, ಪಾವಗಡ ತಾಲ್ಲೂಕಿನ 39 ಗ್ರಾಮಗಳಲ್ಲಿ ಜ್ವರ ಪ್ರಕರಣಗಳು ವರದಿಯಾಗಿದ್ದು ಒಟ್ಟು 3660 ರಕ್ತಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗಿ, ಇವುಗಳಲ್ಲಿ ಮಲೇರಿಯ ಪ್ರಕರಣಗಳು ಕಂಡುಬಂದಿರುವುದಿಲ್ಲ ಪರೀಕ್ಷಿಸಲಾದ 79 ರಕ್ತದ ಮಾದರಿಗಳಲ್ಲಿ 28 ಇಲಿಜ್ವರ ಹಾಗೂ 73 ರಕ್ತದ ಮಾದರಿಗಳಲ್ಲಿ 8 ಡೆಂಗಿ ಜ್ವರ ಪ್ರಕರಣಗಳು ಕಂಡುಬಂದಿರುತ್ತದೆ.

ನಾನು ಖುದ್ದಾಗಿ ಇಲಾಖೆಯ ನಿರ್ದೇಶಕರೊಡನೆ ಪಾವಗಡಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿರುತ್ತೇನೆ. ತುರ್ತು ಚಿಕಿತ್ಸೆಗಾಗಿ ಪಾವಗಡ ಸಾರ್ವಜನಿಕ ಆಸ್ಪತ್ರೆ ಮತ್ತು ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಜೀವರಕ್ಷಕ ಔಷಧಿಗಳ ದಾಸ್ತಾನು ಇರಿಸಲಾಗಿದೆ. ಹಾಗೂ ವೈದ್ಯಕೀಯ ವ್ಯವಸ್ಥೆಗಾಗಿ 6 ವೈದ್ಯರುಗಳನ್ನು ನಿಯೋಜಿಸಲಾಗಿದೆ. ಅವಶ್ಯಕ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವ ಸಲುವಾಗಿ ಹೆಚ್ಚುವರಿ ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಿದ್ದು, 2 ಹೆಚ್ಚುವರಿ ವಾಹನ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

ಸೊಳ್ಳೆಗಳ ನಾಶಕ್ಕಾಗಿ ಕೀಟನಾಶಕ ಧೂಮೀಕರಣ ಕೈಗೊಂಡಿದ್ದು. 7 ಧೂಮೀಕರಣ ಯಂತ್ರಗಳನ್ನು ಪಾವಗಡ ತಾಲ್ಲೂಕಿಗೆ ಒದಗಿಸಲಾಗಿದೆ, ಹಾಗೂ ಶಾಶ್ವತ ನೀರಿನ ತಾಣಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಸೊಳ್ಳೆಗಳ ಉತ್ಪತ್ತಿ ತಡೆಯಲು ಬಿಡಲಾಗಿದೆ. ಈ ಎಲ್ಲಾ ಕಾರ್ಯಗಳನ್ನೆಲ್ಲಾ ಮಲೇರಿಯ ಅಧಿಕಾರಿ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಪಾವಗಡದಲ್ಲಿಯೇ ವಾಸ್ತವ್ಯ ಹೂಡಿದ್ದು ಖುದ್ದಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಶ್ರೀ ಕೆ.ಎಂ. ತಿಮ್ಮರಾಯಪ್ಪ : ಮಾನ್ಯ ಅಧ್ಯಕ್ಷರೆ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಇಷ್ಟೆಲ್ಲ ಸತ್ಯ ಇದ್ದರೂ ಸಹ ಈಗ ನಾನು ಪ್ರಸ್ತಾಪ ಮಾಡತಕ್ಕಂತಹ ವಿಚಾರ ಅಲ್ಲಿ ಹಂದಿಗಳನ್ನು ಕೊಲ್ಲಲು ಏನು ಆದೇಶ ನೀಡಲಾಗಿದೆ. ಆ ಭಾಗದಲ್ಲಿ ಹಂದಿ ಸಾಕಾಣಿಕೆಯಿಂದ ಜೀವನ ನಡೆಸುವ ಕಸಬುದಾರರಿಗೆ ಅನುಕೂಲ ಮಾಡಿಕೊಡಬೇಕು ಅಂತ ಕೋರುತ್ತೇನೆ. ಮತ್ತು ಇನ್ನೂ ಹೆಚ್ಚು ಕೀಟನಾಶಕ ಧೂಮೀಕರಣ ಘಟಕಗಳನ್ನು ಅಳವಡಿಸಬೇಕು ಎಂದು ತಮ್ಮನ್ನೂ ಕೋರುತ್ತಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ 8ರಿಂದ ವೆಂಕಟಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಈ ರೋಗ ಪತ್ತೆಯಾಯಿತು ಅಲ್ಲಿಗೆ ಸರಬರಾಜು ಆಗಬೇಕಾಗಿರತಕ್ಕ ಅಗತ್ಯವಾದ ಎಲ್ಲಾ ಔಷಧಿಗಳನ್ನೂ ನಾವು ಈಗಾಗಲೇ ಪಾವಗಡಕ್ಕೆ ತಲುಪಿಸಿದ್ದೇವೆ. ಅದರ ಜೊತೆಗೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಜಿಲ್ಲಾ ಸರ್ಜ್‌ನ್‌ಗಳಿಗೆ ತಲಾ ಎರಡು ಲಕ್ಷ ರೂಪಾಯಿ ತಾಲ್ಲೂಕು ಆರೋಗ್ಯ ಅಧಿಕಾರಿಗೆ ಒಂದು ಲಕ್ಷ ರೂ ಒಟ್ಟು ತುಮಕೂರು ಜಿಲ್ಲೆಗೆ 14.5 ಲಕ್ಷರೂಗಳನ್ನು ಹೆಚ್ಚುವರಿಯಾಗಿ, ನಿಮ್ಮಲ್ಲಿ ಏನಾದರೂ ಔಷಧಿಯ ಕೊರತೆ ಕಂಡುಬಂದರೆ ಬೇರೆ ಕಡೆಯಿಂದ ಖರೀದಿಸಬೇಕಾದರೆ ಈ ಹಣ ಬಳಸಿಕೊಳ್ಳಿ ಎಂದು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅಲ್ಲಿ ವೈದ್ಯರ ಕೊರತೆಯೂ ಇಲ್ಲ. ಜಿಲ್ಲಾ ಮಲೇರಿಯಾಧಿಕಾರಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಅಲ್ಲೇ ಮೊಕ್ಕಾಂ ಹೂಡಿ ಅಲ್ಲಿ ನಿಗಾವಹಿಸುತ್ತಿದ್ದಾರೆ. ಈಗಾಗಲೇ 3 ಮೊಬೈಲ್ ಯೂನಿಟ್ ಕೊಟ್ಟಿದ್ದು, ಒಂದೊಂದು ಯೂನಿಟ್‌ಗೂ ಒಬ್ಬ ವೈದ್ಯ, ಒಬ್ಬ ನರ್ಸ್ ಒಬ್ಬ ಸಹಾಯಕರನ್ನು ನಿಯೋಜನೆ ಮಾಡಲಾಗಿದೆ. ಬೆಂಗಳೂರು ಕೆಸಿ ಜನರಲ್ ಆಸ್ಪತ್ರೆಯ ಪರಿಣತ ವೈದ್ಯರ ಎರಡು ತಂಡಗಳನ್ನು ಇದರ ಬಗ್ಗೆ ಉಸ್ತುವಾರಿ ವಹಿಸಲು ಕಳಿಸಿಕೊಡಲಾಗಿದೆ. ನಾನು ಅಲ್ಲಿಗೆ ಭೇಟಿ ನೀಡಿದ ಮೇಲೆ ಮೊದಲಿದ್ದ ಒಂದು ಫಾಗಿಂಗ್ ಮೆಶಿನ್ ಜೊತೆಗೆ 7 ಮೆಶಿನ್‌ಗಳನ್ನು ಒದಗಿಸಿ ಪ್ರತಿದಿನ ಅಲ್ಲಿ ಧೂಮ ಹರಡಿಸಬೇಕು ಅಂತ ಹೇಳಿದ್ದೇನೆ. ಇದರ ಜೊತೆಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನೂ ರಚನೆ ಮಾಡಿ ಪ್ರತಿ ದಿವಸ ಮಾಹಿತಿ ಕೊಡಬೇಕು ಅಂತ ನಾನು ಹೇಳಿದ್ದೇನೆ. ನಾನು ಸ್ಥಳಕ್ಕೆ ಭೇಟಿಯಿತ್ತಾಗ ಅಲ್ಲಿನ ಸಾರ್ವಜನಿಕರೆಲ್ಲಾ ಬಂದು ಹೇಳಿದರು ಹಂದಿಗಳು ಜಾಸ್ತಿ ಇವೆ, ಹಂದಿಗಳಿಂದಲೇ ಕಶ್ಮಲವುಂಟಾಗಿ, ಈ ಜ್ವರ ಹರಡುತ್ತಿದೆಯೆಂದು ಹೇಳಿದರು. ಅದಕ್ಕಾಗಿ ಕೂಡಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಎಲ್ಲಾ ಹಂದಿಗಳನ್ನು ಹೊಡೆದು ಹಾಕಲು ಆದೇಶ ಮಾಡಿದ್ದೇನೆ. ಮಾನ್ಯ ಶಾಸಕರು ಹಾಗೆ ಮಾಡಬೇಡಿ ಎಂದು ಮನವಿ ಸಲ್ಲಿಸುತ್ತಿರುವಂತಿದೆ? ಆದರೆ ಈ ರೋಗ ಬಹಳ ಇರುವಾಗ ಆ ಕಾರ್ಯ ಮಾಡಬೇಕಾಗುತ್ತದೆ ಅಥವಾ ಆ ಹಂದಿಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡಲು ಸೂಕ್ತ ಸ್ಥಳ ನಿಗದಿಗೆ ಮಾನ್ಯ ರವಿನ್ನೂ ಸಚಿವರ ಜೊತೆ ಮಾತನಾಡಿ ಬೇರೆ ಸ್ಥಳ ಒದಗಿಸಲು ಯೋಚನೆ ಮಾಡುತ್ತೇನೆ. ಇದುವರೆಗೂ ಈ ಎಲ್ಲಾ ಕ್ರಮ ಕೈಗೊಂಡಿದ್ದರಿಂದಲಿ ಅಲ್ಲಿ ಕಡಿಮೆಯಾಗುತ್ತಿದೆ ಅಂತ ನನಗೆ ವರದಿ ಬಂದಿದೆ. ಎಲ್ಲ ಎಚ್ಚರಿಕೆಯನ್ನು ಆರೋಗ್ಯ ಇಲಾಖೆ ವಹಿಸುತ್ತಿದೆ.

ಶ್ರೀ ಎಂ. ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರ ಆಫ್ಜಲ್‌ಪುರದಲ್ಲೂ ಸಹ ಇಲಿ ಜ್ವರ ವ್ಯಾಪಕವಾಗಿ ಹರಡಿದೆ, ಆ ಇಲಿ ಜ್ವರ ದಲ್ಲಿ ಒಂದು ಮಗು ಮೃತಪಟ್ಟಿದೆ. ಬಹಳ ಪ್ರಾಮುಖ್ಯವಾದ ಸಮಸ್ಯೆ ಇದೆ.

ಅಧ್ಯಕ್ಷರು : ನೀವು ಸಿಗ್ನೇಟರಿ ಅಲ್ಲ, ನಿಯಮಾವಳಿ ಪ್ರಕಾರ ನೀವು ಭಾಗವಹಿಸುವಂತಿಲ್ಲ. ನಿಮ್ಮ ವಿಷಯವನ್ನೇ ಬರೆದು ಕಳಿಸಿ ನಾಳೆ ಅವಕಾಶ ಕೊಡುತ್ತೇನೆ. ಈಗ ವಿತ್ತೀಯ ಕಾರ್ಯಕ್ರಮ ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿನ್ನೆಯ ನಿಮ್ಮ ಭಾಷಣ, ಈಗ ಎರಡು ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಿಬಿಡಿ.

6. ವಿತ್ತೀಯ ಕಾರ್ಯಕಲಾಪ

2006-07ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಅನೇಕ ಸಾರಿ ಮಾಜಿ ಶಾಸಕರು ಸಚಿವರು ನಿಧನರಾದಾಗ ಇಲ್ಲಿ ಸಂತಾಪ ಸೂಚನೆ ಮಾಡುವಾಗ ಹಣಕಾಸಿನ ಸಹಾಯ ಮಾಡಬೇಕು ಅವರ ಕುಟುಂಬವರ್ಗದವರಿಗೆ ಎಂದು ಹೇಳಿದ್ದೇನೆ. ಶಾಸಕರು ನಿಧನರಾದರೆ ಅವರ ಮನೆಯವರಿಗೆ ಯಾರೂ ಸಹಕಾರ ಮಾಡುತ್ತಾ ಇಲ್ಲ, ಬರೀ ಶಾಸನಸಭೆಯಲ್ಲಿ ಸಂತಾಪ ಸೂಚನೆ ಮಾಡುವುದನ್ನು ಬಿಟ್ಟರೆ ಯಾವ ಹಣಕಾಸು ಸಹಾಯ ಸೌಲಭ್ಯ ಮಾಡುತ್ತಾ ಇಲ್ಲ. ಆದ್ದರಿಂದ ಅದಕ್ಕೆ ವಿಶೇಷವಾಗಿ ಆಯವ್ಯಯದಲ್ಲಿ ಎಷ್ಟು ಕೊಡಬೇಕು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮಾಜಿ ಶಾಸಕರು ಅಥವಾ ಸಚಿವರು ನಿಧನರಾದಾಗ ಅವರ ಸಂಸಾರದ ವ್ಯವಸ್ಥೆ ಹದಗೆಟ್ಟು ಬಹಳ ತೊಂದರೆಯಲ್ಲಿರುತ್ತಾರೆ. ಅವರಿಗೆ ಏನಾದರೂ ಕನಿಷ್ಠ ನಮ್ಮ ಸಹಾಯ ಸಹಕಾರ ಮಾಡಬೇಕಾಗುತ್ತದೆ. ಆಯವ್ಯಯದಲ್ಲೇ ಇದಕ್ಕೆ ಹಣ ಒದಗಿಸಿ ಒಂದು ಸಂಸಾರಕ್ಕೆ ಕನಿಷ್ಠ 5 ಲಕ್ಷ ರೂ ಸರ್ಕಾರ ಕೊಡುವ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಕೇಳುತ್ತಿದ್ದೇನೆ. ಇದರ ಜೊತೆಗೆ ಇಲ್ಲೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಶಾನನಸಭೆಯಲ್ಲಿ ಅತ್ಯಂತ ಕೆಲಸ ಮಾಡಿದಂಥ ಪ್ರೊಃ ನಂಜುಂಡಸ್ವಾಮಿಯವರು ಮತ್ತು ರೈತ ಸಂಘವನ್ನು ಕಟ್ಟಿದಂಥವರು, ರೈತ ಸಂಘದಲ್ಲಿ ಬೆಳೆದಂಥವರು , ಅವರು ಸ್ವಲ್ಪ ಹೆಚ್ಚು ಕಡಿಮೆ ನಾನು ಇದನ್ನು ಮಾನ್ಯ ರೆವಿನ್ಯೂ ಮಂತ್ರಿಗಳಾದ ಶೆಟ್ಟರ್‌ರವರ ಗಮನಕ್ಕೆ ತರುತ್ತಿದ್ದೇನೆ. ನಂಜುಂಡಸ್ವಾಮಿಯವರ ವೈದ್ಯಕೀಯ ವೆಚ್ಚವನ್ನು ಅವರ ಮನೆಯವರು ಕೊಟ್ಟು ಒಂದೂವರೆ ವರ್ಷವಾಗಿದ್ದರೂ ಬರೀ 1 ಲಕ್ಷದ 34 ಸಾವಿರ ರೂಪಾಯಿ ನೇರವಾಗಿ ಕೊಡಬೇಕಾದುದ್ದಕ್ಕೆ ಅವರ ಮಕ್ಕಳು ಇದಕ್ಕಾಗಿ ಒಂದೂವರೆ ವರ್ಷದಿಂದ ಅಲೆಯುತ್ತಿದ್ದಾರೆ. ಇವತ್ತಿನವರೆಗೂ ಅವರಿಗೆ ಕೊಟ್ಟಿಲ್ಲವೆಂದರೆ ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಪತ್ರವನ್ನು ಬರೆದಿದ್ದೇನೆ. ತಮ್ಮ ಮೂಲಕ ಇದನ್ನು ನಾನು ಕಂದಾಯ ಸಚಿವರಿಗೆ ಕಳುಹಿಸುತ್ತೇನೆ. ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಅವರ ಮಕ್ಕಳ ಹೆಸರಿಗೆ ತಾವು ಕಳುಹಿಸಿಕೊಡಬೇಕೆಂದು ಹೇಳಿ ಅವರು ಕರ್ನಾಟಕ್ಕೆ ಬಹಳ ದುಡಿದಂಥ ವ್ಯಕ್ತಿ ಕರ್ನಾಟಕಕ್ಕೆ ತ್ಯಾಗ ಮಾಡಿದಂಥವರು. ರೈತರ ಬಗ್ಗೆ ಅಪಾರವಾದ ಕೆಲಸ ಮಾಡಿದಂಥ ವ್ಯಕ್ತಿ, ಅವರ ಬಗ್ಗೆ ನಾವು ಇಷ್ಟು ಲಘುವಾಗಿ ತೆಗೆದುಕೊಂಡು ಅವರ ಮಕ್ಕಳು ಇಲ್ಲಿ ಓಡಾಡತಕ್ಕಂಥದ್ದು ನಮಗ್ಯಾರಿಗೂ ಗೌರವ ಬರತಕ್ಕದ್ದಲ್ಲ. ಆದ್ದರಿಂದ ತಮ್ಮೂಲಕ ಇದನ್ನು ಗಮನಕ್ಕೂ ಕೂಡ ತರುತ್ತಿದ್ದೇನೆ.